Doc-360
T.P-2

51st Year of Publication ★ SATYAVADI Daily, MYSORE 4

Reg No B G 155 ಶ್ರೀ 24-8-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆಸೆ
ಅಂಚೆಯವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

ಹಬ್ಬಕ್ಕಾಗಿ

ಆಕರ್ಷಣೀಯ ಬಣ್ಣಗಳ ತರಹಾವರಿ ಸೀರೆಗಳೂ, ಬಟ್ಟೆಗಳೂ ಸರಿಯಾದ ಬೆಲೆಗೆ ದೊರೆಯುತ್ತವೆ.

ಸರಸ್ವತಿರಾಂ ಹಾಲ್
ಸಯ್ಯಾಜೀರಾವ್ ರೋಡ್ ಮೈಸೂರು

ಸ್ಥಾಪಕರು : ಅನುಮತಿ ಚರಿತ್ರೆಯವರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭೂ ಕಂದಾಯ ವಜಾಕ್ಕೆ ಒತ್ತಾಯ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಂತ್ರಿವರ್ಗದವರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಸ್. ಕೆ ಇರಾನಿಯವರು, ಶ್ರೀ ಮಾಧವ್ ಕೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೋಬ್ರದಾನಿ ಡಾ|| ಎಂ. ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವನ್ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಜಾಮರಾಜಪುರಂ, ಮೈಸೂರು 4.

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಗೆ 'ಬ್ಯಾಂಕ್ ರೋಡ್, ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ ಅನಂತರಲ್ಲಿ ಸಾಪ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಜೌಕಸಿ ಇಲ್ಲ. ಹೆಚ್ಚು ಹೇಳುವುದೂ ಇಲ್ಲ, ಕಡಿಮೆ ಕೊಡುವುದೂ ಇಲ್ಲ. ಒಟ್ಟನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ಪೋಪರ ರಾಜ್ಯ

ವಿಶ್ವದಲ್ಲಿ ಅತ್ಯಂತ ಸಣ್ಣ ಸ್ವಾಮಿತ್ವ ರಾಜ್ಯವು ಪೋಪ್‌ರವರ ವೆಟಿಕರ್ ನಗರ. ಇದು ರೋಂ ನಗರದಲ್ಲಿದ್ದು, 108.7 ಎಕ್ರೆ ಜಮೀನನ್ನು ಒಳಗೊಂಡಿದೆ ; ಅದರಲ್ಲಿ ವೆಟಿಕರ್ ಅರಮನೆ, ಮ್ಯೂಸಿಯಂ, ಕಲಾ ಗ್ಯಾಲರಿ (ವಿಶ್ವದಲ್ಲೇ ಮಹೋನ್ನತವಾದ ಕೆಲವು ವರ್ಣಚಿತ್ರಗಳೂ, ಶಿಲ್ಪಕಲೆಯೂ ಇವೆ, ತೋಟಗಳೂ, ಲೈಬ್ರರಿಗಳೂ ರೇಡಿಯೋ ಸ್ಟೇಷನ್ (30 ಭಾಷೆಗಳಲ್ಲಿ ಪ್ರಸಾರ ಮಾಡುವುದು) ಇವೆ ; ಪ್ರಖ್ಯಾತ ಖಗೋಳ ಅಬ್ಸರ್ವೇಟರಿ, ಚಿಕ್ಕ ಕೈಲ್ವೇ ಎರ್ಪಾಡು, 25 ಭಾಷೆಗಳಲ್ಲಿ ಮುದ್ರಿಸಲು ಸೌಕರ್ಯವಿರುವ ಮುದ್ರಣ

ಎ ಐ ಸಿ ಸಿ ಆರ್ಥಿಕ ಪರಿಸ್ಥಿತಿ

ನವದೆಹಲಿ— ಅಖಿಲ ಭಾರತ ಕಾಂಗ್ರೆಸ್ ಸಮಿತಿ ಆರ್ಥಿಕ ಪರಿಸ್ಥಿತಿ ಉತ್ಕಟವಾಗಿದ್ದು ಅದರ ದಿನದಿನದ ಕಾರ್ಯ ನಡೆಸಲು ರೂ. 1 ಲಕ್ಷ ಅವಶ್ಯಕವಿಡೆಯೆಂದು ಪ್ರಕಟವಾಗಿದೆ.

★

ಭೂಕಂದಾಯ ವಜಾ ಆಗಬೇಕು

ಸೆಪ್ಟಂಬರು 2 ರಿಂದ ಮೂರುತಿಂಗಳೊಳಗೆ ಭೂ ಕಂದಾಯ ವಜಾಮಾಡದಿದ್ದರೆ ರಾಜ್ಯಾದ್ಯಂತ ಕಿಸಾನ್ ಸತ್ಯಾಗ್ರಹ ಹೂಡಲಾಗುವುದೆಂದು ಪಿಎಸ್ಪಿ ರಾಜ್ಯ ಶಾಖೆಯು ಸರಕಾರಕ್ಕೆ ಕಟ್ಟಕಡೆ ತಿಳುಹಳಿಕೆ ಕೊಟ್ಟಿದೆ.

★

ಹರತಾಳ

ಗೌಹತಿ— ಸಂಗ್ರಾಂ ಪರಿಷತ್ತು ನಿನ್ನೆ ಕರೆಕೊಟ್ಟಿದ್ದ ಹರತಾಳವು ಯಶಸ್ವಿಯಾಗಿ ಜರುಗಿತು — ಅಂಗಡಿಗಳು, ವಾಣಿಜ್ಯ ಇಂಜಿನೀರಿಂಗು ಸಂಸ್ಥೆಗಳು, ರೈಲು ಮತ್ತು ವಾಹನಗಳು, ಅಸ್ಸಾಂ ವ್ಯಾಲಿ ಜಿಲ್ಲೆಗಳಲ್ಲಿ ಸ್ತಬ್ಧವಾಗಿದ್ದವು.

ಪಾರ್ಲಿಮೆಂಟಿನಲ್ಲಿ

ನವದೆಹಲಿ— ವಿಶ್ವಸಂಸ್ಥೆ ರಕ್ಷಣಾ ಸಮಿತಿಯಲ್ಲಿ ಜೊಕೊಸ್ಲೋವಿಯಾ ಸಂಬಂಧದ ಠರಾವು ಬಂಹಾಗ ಭಾರತ ಗೈರು ಹಾಜರಾಗಿದ್ದುದರ ಬಗ್ಗೆ ಲೋಕಸಭೆಯಲ್ಲಿ ಕಮ್ಯುನಿಸ್ಟರು ಚಿಟ್ಟು ಮಿಕ್ಕ ವಿರೋಧ ಸದಸ್ಯರು ತೀರ ಆಕ್ಷೇಪಣೆ ಮಾಡಿದರು — ಈ ಠರಾವಿನಲ್ಲಿ 'ಖಂಡನೆ" ಮಾತಿದ್ದುದರಿಂದ ಭಾರತ ವೋಟು ಮಾಡಲಿಲ್ಲ ವೆಂದು ಪ್ರಧಾನಿಯವರು ತಿಳಿಸಿದರು — ಸಭಾಪರಿತ್ಯಾಗ ಮಾಡಲಾಯಿತು.

★

ನವದೆಹಲಿ— ಪಂಜಾಬಿನಲ್ಲಿ ಅಧ್ಯಕ್ಷರ ಆಳ್ವಿಕೆ ಜಾರಿಗೆ ತರಲಾಯಿತೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಚೀನೀಯರ ಧಾಂಧಲೆ

ನವದೆಹಲಿ— ನೇಪಾಳಕ್ಕೆ ಚೀನೀಯರ ಧಾಂಧಲೆ ಭಯವಿಷಯವೆಂದು ಗೃಹಸ್ಟೇಟ್ ಮಂತ್ರಿ ಶ್ರೀ ಶುಕ್ಲಾರವರು ಲೋಕಸಭೆಯಲ್ಲಿ ತಿಳಿಸಿದರು.

★

ರಾತ್ರಿ ನೃತ್ಯಗಳು

ಮದರಾಸು— ರಾತ್ರಿ ನೃತ್ಯಗಳನ್ನು ಏರ್ಪಡಿಸುತ್ತಿರುವ ಕೆಲವು ಹೋಟಲುಗಳಿಗೆ ಪೋಲೀಸರು ಎಚ್ಚರಿಕೆ ನೀಡಿದ್ದಾರೆ — ಆ ನೃತ್ಯಗಳು ಆಶ್ಲೀಲವಾದುದೆಂದು ದೂರು ಬಂದಿರುವುದಾಗಿ ವರದಿಯಾಗಿದೆ.

★

ಮೈಸೂರು ದಸರಾ ವಸ್ತುಪ್ರದರ್ಶನ 1968

ದಸರಾ ಹಬ್ಬಗಳಿಗೆ ಸಂಬಂಧಪಟ್ಟಂತೆ, ಅಖಿಲ ಭಾರತ ಕೈಗಾರಿಕಾ ಮತ್ತು ವ್ಯಾಪಾರ ವಸ್ತುಪ್ರದರ್ಶನವು ಮೈಸೂರು ನಗರದಲ್ಲಿ ಮಾಮೂಲಿನಂತೆ 1968 ನೆ, ಸೆಪ್ಟಂಬರ್ 23 ರಿಂದ 1968 ನೇ ಆಕ್ಟೋಬರ್ 31 ರವರೆಗೆ ಏರ್ಪಡಿಸಲಾಗುವುದು. 1968 ನೇ ಆಕ್ಟೋಬರ್ 1 ರಂದು ವೈಭವಯುತ ದಸರಾ ಮೆರವಣಿಗೆಯು ವಿಜಯದಶಮಿ ಸಂಜೆ ನಡೆಯುತ್ತದೆ. ಎಲ್ಲಾ ರಾಜ್ಯ ಸರಕಾರಗಳೂ, ಕೇಂದ್ರ ಸರ್ಕಾರ ಮತ್ತು ಕೈಗಾರಿಕೋದ್ಯಮಿಗಳು ವಸ್ತುಪ್ರದರ್ಶನದಲ್ಲಿ ಭಾಗವಹಿಸುವರು.

ಈ ವರ್ಷ ಎ ಸ್ಟಾಲುಗಳು (1-26) ಬಿ (4 ರಿಂದ 37) ಸಿ (8 ರಿಂದ 29) ಮತ್ತು ಇ ಬ್ಲಾಕ್ (10 ರಿಂದ 29) ಅಲಾಟ್‌ಮೆಂಟ್ ರೀತಿಯಲ್ಲಲ್ಲದೆ, ಟೆಂಡರ್ ರೀತಿಯಲ್ಲಿ ಕೊಡಲಾಗುವುದು.

ಸ್ಟಾಲ್‌ಗಳಿಗೆ ಮತ್ತು ಕೆಲವು ವಿಭಾಗಗಳಿಗೆ ಅರ್ಜಿಗಳನ್ನು ಸ್ವೀಕರಿಸುವ ಕಡೆಯ ದಿನ ಈ ರೀತಿ ಇದೆ—

1	ಜನರಲ್ ಸ್ಟಾಲ್	28-8-68
2	ಟೆಂಡರ್ ಸ್ಟಾಲ್‌ಗಳು	7-9-68 ಮಧ್ಯಾಹ್ನ 2 ಗಂಟೆಗೆ ಮುಂಚೆ
3	ಕುಶಲ ಕಲೆ ಮತ್ತು ಕೈಕಸಬುಗಳ ಪ್ರವೇಶ	4-9-68
4	ಮಹಿಳೆಯರ ವಿಭಾಗದಲ್ಲಿನ ಪ್ರದರ್ಶನ	18-9-68 ರಿಂದ 20-9-68 ರವರೆಗೆ
5	ಸಾಂಸ್ಕೃತಿಕ	26-9-68

ಪಿ ಐ ಡಿ/1102/68 ಸಹಿ/- ಆರ್. ರಾಜಣ್ಣ
ಕಾರ್ಯದರ್ಶಿ

ಹಿಂದೂಗಳ ಆಚಾರ

ಸಂಗ್ರಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ದೇಶದ ಪ್ರತಿಯೊಂದು ಗ್ರಾಮ ಪಟ್ಟಣದಲ್ಲಿಯೂ ಅನೇಕ ದೇವಾಲಯಗಳಿವೆ. ದೇವಾಲಯಗಳು ಇರುವ ಉದ್ದಿಶ್ಯ ಎರಡು ಕಾರಣಗಳಿಗಾಗಿ. ಮೊದಲನೆಯದು ಆಗಮಶಾಸ್ತ್ರದ ಜನುಸಾರವಾಗಿ ನಿತ್ಯ ನೈಮಿತ್ತಿಕ ಪೂಜೆ, ಜೋವ ಮತ್ತು ಉತ್ಸವಾದಿಗಳನ್ನು ನಡೆಸಿ, ರಾಷ್ಟ್ರಕ್ಕೆ ಆಭ್ಯುದಯ ಉಂಟುಮಾಡುವುದಕ್ಕಾಗಿ. ಎರಡನೆಯದು ಜನರಿಗೆ ದೇವರಲ್ಲಿ ಭಕ್ತಿ ಉಂಟಾಗುವಂತೆ ಮಾಡುವುದು. ಇದನ್ನೇ ಶಾಸ್ತ್ರಗಳಲ್ಲಿ ಅಂತರ್ಯಾಗ, ಬಹಿರ್ಯಾಗವೆಂದು ಕರೆದಿದ್ದಾರೆ. ದೇವಾಲಯಗಳ ಇಂದಿನ ನೋಟವಿದರೆ ಇವೆರಡಕ್ಕೂ ವಿರೋಧವಾಗಿರುವಂತೆಯೇ ಭಾಸವಾಗುತ್ತಿದೆ. ದೇವಾಲಯಗಳ ಆಡಳಿತವನ್ನು ಸರಕಾರ ವಹಿಸಿಕೊಂಡಿದೆ. ಸರಕಾರ ವಹಿಸಿಕೊಂಡಿದೆ. ಸರಕಾರದ ಅಧಿಕಾರಿಗಳು ದೇವಾಲಯ ನಿಧಿಯಲ್ಲಿ ಸಾಧ್ಯವಾದಷ್ಟು ಮಿಗಿಸಿ ಬೇರೆ ಬಾಬುಗಳಿಗೆ ಉಪಯೋಗಪಡಿಸುವದಕ್ಕೆ ಹೆಚ್ಚು ಪ್ರಯತ್ನಿಸುವುದೇ ಎಲ್ಲೆಲ್ಲಿಯೂ ಕಂಡುಬರುತ್ತದೆ. ದೇವಸ್ಥಾನದ ಅಭಿವೃದ್ಧಿಗೆ ಅಷ್ಟಾಗಿ ಗಮನ ಕೊಡುವಂತೆ ತೋರಲಿಲ್ಲ. ಇದರಿಂದ ಅನೇಕ ಕಡೆ ದೇವಾಲಯಗಳು ಭಗ್ನಗೊಂಡು, ನಿತ್ಯಪೂಜೆ ಇಲ್ಲದೇ ಇರುವ ಅನೇಕ ದೇವಾಲಯಗಳು ದೇಶಾದ್ಯಂತ ಗೋಚರವಾಗುತ್ತಿದೆ.

ರಾಜಕೀಯ ನಾಯಕರು ತಮ್ಮ ಸಾರ್ಥಸಾಧನೆಗಾಗಿ ಆಗಮಶಾಸ್ತ್ರಗಳನ್ನು ಧಿಕ್ಕರಿಸಿ ತಮಗೆ ತೋರಿದಂತೆ ನಡೆಸುತ್ತಿರುವದರಿಂದ, ದೇವಾಲಯದ ನೌಕರರು ಶಾಸ್ತ್ರಗಳ ಬಗ್ಗೆ ತಾತ್ಸಾರಹೊಂದಿ, ದೇವಾಲಯದ ಕೆಲಸಮಾಡುವುದು ಕೇವಲ ಹಣ ಸಂಪಾದನೆಗಾಗಿ, ಯಾವ ರೀತಿಯಲ್ಲಾದರೂ ಸಾಧ್ಯವಾದಷ್ಟು ಹೆಚ್ಚು ಹಣ ಸಂಪಾದನೆಯ ಮಾರ್ಗ ನೋಡುತ್ತಾರೆಯೇ ಹೊರತು, ಶಾಸ್ತ್ರಗಳ ಆಜ್ಞೆಗಾಗಿಲೀ, ಜನರ ಮನೋಭಾವನೆಗಾಗಲೀ ಅಷ್ಟಾಗಿ ಗಮನ ಕೊಡುತ್ತಿಲ್ಲ.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಜಯುರ್ವೇದ ಔಷಧಗಳನ್ನು ಇಲ್ಲಿ ದೊರೆಯುತ್ತವೆ

ಫುಡ್‌ಲಾಂಡ್ ಜನಪ್ರಿಯ 3 ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಫೈಟ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ,

ಮುಕ್ರಿ, ಆಗಾ ಮುಂತಾದವರು

ಸಂಗೀತ —

ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೆರ— ದಿಗ್ವಿಜಯ 8 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

ಶ್ರೀದ್ವಾರಕಾ ಜಗದ್ಗುರು ಮಹಾಸಂಸ್ಥಾನಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪಾಣಿದಯೆ, ತಾಖಾಹಾರ ಪಶುವೈದ್ಯ

ವಿಚಾರಗಳ ಏಕೈಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವಂಡ್ಡಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜೆ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ ಹೊಂಗನೂರು

ಗೋರಕ್ಷಣ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

ಗೋರಕ್ಷಣೆ ಮಾಡಿ ಪಾಣಿದಯಾ ಕಾರ್ಯಗಳು ಹೆಚ್ಚಿಗಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4